(43) (9)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ಇವರು ನಿಯಮ-72ರಡಿ ಮಂಡಿಸಿರುವ ಸೂಚನಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಉತ್ತರ.**

*********

**ವಿಷಯ:** ಯಕ್ಷಗಾನವು ಕರಾವಳಿ ಭಾಗದ ಗಂಡು ಕಲೆ. ತೆಂಕತಿಟ್ಟು ಹಾಗೂ ಬಡಗುತಿಟ್ಟುಗಳೆಂಬ ಪ್ರಬೇಧಗಳಿದ್ದರೂ ಯಕ್ಷಗಾನವು ಕರಾವಳಿ ಹಾಗೂ ಮಲೆನಾಡಿನ ಜನರ ಸಾಂಸ್ಕೃತಿಕ ರಾಯಭಾರಿಯಾಗಿದ್ದು, ನೃತ್ಯ, ಹಾಡುಗಾರಿಕೆ, ಮಾತುಗಾರಿಕೆ ಹಾಗೂ ವೇಷಭೂಷಣಗಳನ್ನೊಳಗೊಂಡ ಶಾಸ್ತ್ರೀಯ ಕಲೆಯಾಗಿದೆ. ಜನರ ಧಾರ್ಮಿಕತೆ ಹಾಗೂ ಸಂಪ್ರದಾಯದೊಂದಿಗೆ ಬೆಸೆದುಕೊಂಡಿರುವ ಈ ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು, ಈಗಿರುವ ಯಕ್ಷಗಾನ ಅಕಾಡೆಮಿಯನ್ನು ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರವಾಗಿ ಮೇಲ್ದರ್ಜೆಗೇರಿಸಿ ಹೆಚ್ಚಿನ ಅನುದಾನ ಒದಗಿಸುವ ವಿಷಯದ ಕುರಿತು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

**********

**ಉತ್ತರ:** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 273 ಕರಅ 2007, ದಿನಾಂಕ:19.09.2007ರಲ್ಲಿ ಜಾನಪದ ಅಕಾಡೆಮಿಯಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯನ್ನು ರಚಿಸಲಾಗಿರುತ್ತದೆ.

ನಂತರ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 195 ಕಸಧ 2017 ದಿನಾಂಕ:27.06.2017ರಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕರ್ನಾಟಕ ಬಯಲಾಟ ಅಕಾಡೆಮಿ ಎಂದು ಪ್ರತ್ಯೇಕಗೊಳಿಸಲಾಗಿರುತ್ತದೆ.

ಮುಂದುವರೆದು, ಕರ್ನಾಟಕ ಯಕ್ಷಗಾನ ಅಕಾಡೆಮಿಯು ಯಕ್ಷಗಾನ ಕಲೆಯಲ್ಲಿ ಪಡುವಲಪಾಯ ಮತ್ತು ಮೂಡಲಪಾಯ ಎಂಬ ಎರಡು ಮುಖ್ಯ ಪ್ರಕಾರಗಳಿದ್ದು, ಒಂದು ಕರಾವಳಿಯ ಪಡುವಲಪಾಯ ಯಕ್ಷಗಾನವು, ತೆಂಕು, ಬಡಗು, ಬಡಾಬಡಗು ಯಕ್ಷಗಾನ ಗೊಂಬೆಯಾಟ, ತಾಳಮದ್ದಲೆಯನ್ನು ಒಳಗೊಂಡಿರುತ್ತದೆ. ಮೂಡಲಪಾಯದಲ್ಲಿ ಮೂಡಲಪಾಯ ಯಕ್ಷಗಾನ, ಘಟ್ಟದಕೋರೆ, ಕೇಳಿಕೆ ಪ್ರಕಾರಗಳು ಇರುತ್ತವೆ.

ಕರ್ನಾಟಕ ಯಕ್ಷಗಾನ ಅಕಾಡೆಮಿಯು ತನ್ನ ಉದ್ದೇಶಿತ ಕ್ಷೇತ್ರಗಳಲ್ಲಿ ವಿಚಾರ ಸಂಕಿರಣ, ಕಾರ್ಯಾಗಾರ, ಸಂವಾದ, ತಾಳಮದ್ದಲೆ, ಯಕ್ಷಗಾನ ಗೊಂಬೆಯಾಟ, ದಾಖಲೀಕರಣ, ಸಾಕ್ಷ್ಯಚಿತ್ರ, ಯಕ್ಷಗಾನ ತರಬೇತಿ, ಮೂಡಲಪಾಯ ತರಬೇತಿ, ಹಿರಿಯರ ನೆನಪು, ಪುಸ್ತಕ ಪ್ರಕಟಣೆ, ಯಕ್ಷಗಾನ ಶಿಬಿರಗಳು, ಪ್ರಾತ್ಯಕ್ಷಿಕೆ, ಕಮ್ಮಟ, ಹೊರನಾಡು ಕಾರ್ಯಕ್ರಮ ಹಾಗೂ ಮಾಸಾಶನ ಸಂದರ್ಶನ ಇತ್ಯಾದಿ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಪ್ರತಿ ವರ್ಷ ಅಕಾಡೆಮಿ ವತಿಯಿಂದ 1 ಪಾರ್ತಿಸುಬ್ಬ ಪ್ರಶಸ್ತಿ, 5 ಗೌರವ ಪ್ರಶಸ್ತಿ, 10 ಯಕ್ಷಸಿರಿ ಪ್ರಶಸ್ತಿ, 03 ಪುಸ್ತಕ ಬಹುಮಾನ ಹಾಗೂ ದಿ||ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ಇವರ ಹೆಸರಿನಲ್ಲಿ 1 ದತ್ತಿನಿಧಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಕಾಲಕಾಲಕ್ಕೆ ಇಲಾಖೆಯ ಅಂಗರಚನೆಯ (ಬೈಲಾ) ಪ್ರಕಾರ ಸರ್ಕಾರ ನೇಮಿಸುತ್ತದೆ.

....2/-

ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯು ಹಮ್ಮಿಕೊಂಡು ಬರುತ್ತಿದ್ದು, ಯಕ್ಷಗಾನ ಕಲೆಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಯಕ್ಷಗಾನ ಕಲೆಗೆ ಪ್ರೋತ್ಸಾಹ ನೀಡುವ ಕುರಿತಾಗಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರಗಳ ಕಾರ್ಯಚಟುವಟಿಕೆಗಳು ಒಂದೇ ರೀತಿಯಾಗಿ ಹಮ್ಮಿಕೊಳ್ಳುವುದಾಗಿರುತ್ತದೆ.

ಕಡತ ಸಂಖ್ಯೆ: ಕಸಂವಾ 38 ಕವಿಸ 2024

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.